unicef
unite for children

# “ನನ್ನ ಹಳ್ಳಿಯಲ್ಲಿ ಒಂದೇ ಒಂದು ಬಾಲ್ಯ ವಿವಾಹ ಪ್ರಕರಣವಿಲ್ಲ. ನಿಮ್ಮಲ್ಲಿದೆಯೇ?”

- ಸಾಯಿನಾಥ, ಗ್ರಾಮ ಪಂಚಾಯತಿ ಅಧ್ಯಕ್ಷರು



- 18 ವರ್ಷದೊಳಗಿನ ಹೆಣ್ಣುಮಕ್ಕಳಿಗೆ, 21 ವರ್ಷದೊಳಗಿನ ಗಂಡು ಮಕ್ಕಳಿಗೆ ಮದುವೆ ಮಾಡುವುದು, ಮಾಡಿಸುವುದು, ಅದಕ್ಕೆ ಸಾಕ್ಷಿಯಾಗುವುದು ಶಿಕ್ಷಾರ್ಹ ಅಪರಾಧವಾಗಿದೆ.
- ತಾಯ್ತನ ಮತ್ತು ಮನೆಯ ಜವಾಬ್ದಾರಿಗಳನ್ನು ವಹಿಸಿಕೊಳ್ಳಲು 18 ವರ್ಷ ಕೆಳಗಿನ ವಯಸ್ಸಿನ ಬಾಲಕಿಯರು ದೈಹಿಕವಾಗಿ ಮತ್ತು ಮಾನಸಿಕವಾಗಿ ತಯಾರಾಗಿರುವುದಿಲ್ಲ ಮತ್ತು ಪ್ರಬುದ್ಧರಾಗಿರುವುದಿಲ್ಲ.
- ಬಾಲ್ಯ ವಿವಾಹದ ಯಾವುದೇ ಪ್ರಕರಣ ನಿಮ್ಮ ಗಮನಕ್ಕೆ ಬಂದಾಗ ದಯವಿಟ್ಟು ಸ್ಥಳೀಯ ಇಲಾಖೆಗೆ ದೂರ ಕೊಡಿ.
- ತಂದೆ–ತಾಯಿಗಳ ಮೇಲೆ ಮತ್ತು ಸಮಾಜದ ಮೇಲೆ ಒತ್ತಡ ಹಾಕಿ ‘‘ಬಾಲ್ಯವಿವಾಹ’’ ತಪ್ಪಿಸಲು ಪ್ರಯತ್ನಿಸಿ.

ನಮ್ಮ ಊರು ನಮ್ಮ ಮಕ್ಕಳು

ಇದು ಕರ್ನಾಟಕ ಸರ್ಕಾರ ಮತ್ತು ಯುನಿಸೆಫ್‌ನ ಸಂದೇಶ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ಜಿಲ್ಲಾಡಳಿತ (229011), ಜಿಲ್ಲಾ ಪಂಚಾಯತ್ (228448), ಪೊಲೀಸ್ ಇಲಾಖೆ (235100), ಕಾರ್ಮಿಕ ಇಲಾಖೆ (226368), ಸಾರ್ವಜನಿಕ ಶಿಕ್ಷಣ ಇಲಾಖೆ (226162), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (226292), ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಘ(227581), ರಾಯಚೂರು ಹಾಗೂ ಯುನಿಸೆಫ್ “ಮಕ್ಕಳ ಸಂರಕ್ಷಣಾ” ಯೋಜನೆ, ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು.(230610).

unicef
unite for children

# “ನಮ್ಮ ಹಳ್ಳಿಯಲ್ಲಿ 100% ಮಕ್ಕಳು ನಿರಂತರವಾಗಿ ಶಾಲೆಗೆ ಹೋಗುತ್ತಾರೆ. ನಿಮ್ಮ ಹಳ್ಳಿಯಲ್ಲಿ ಹೋಗುತ್ತಾರೆಯೇ?”

– ಶಾಲಾ ಶಿಕ್ಷಕಿ



- ಮಕ್ಕಳನ್ನು ಶಾಲೆಗೆ ದಾಖಲಾತಿ ಮಾಡುವುದರಿಂದ ನಮ್ಮ ಜವಾಬ್ದಾರಿ ಮುಗಿಯಲ್ಲ ಅವರು ನಿರಂತರವಾಗಿ ಶಾಲೆಗೆ ಹೋಗುತ್ತಿರುವುದನ್ನು ನಾವು ಖಾತ್ರಿಪಡಿಸಬೇಕು.
- ಪ್ರತಿಯೊಬ್ಬ ಶಿಕ್ಷಕರು ಕೂಡಾ ತರಗತಿಗೆ ಹಾಜರಾಗುತ್ತಾರೆ ಮತ್ತು ಮಕ್ಕಳಿಗೆ ಇತರ ಸೌಲಭ್ಯಗಳೊಂದಿಗೆ ಉಚಿತವಾಗಿ ಬಿಸಿಯೂಟ ನೀಡಲಾಗುತ್ತಿದೆ ಎಂಬುದನ್ನು ನಾವು ಖಚಿತಪಡಿಸಿಕೊಳ್ಳಬೇಕು.
- ‘ಶಿಕ್ಷಣ ಹಕ್ಕು 2009’, ಪ್ರಕಾರ 8 ನೇ ತರಗತಿ ವರೆಗೆ ಎಲ್ಲಾ ಮಕ್ಕಳಿಗೆ ಉಚಿತವಾಗಿ ಶಿಕ್ಷಣ ಪಡೆಯುವ ಹಕ್ಕಿದೆ ಯಾವ ಮಗುವನ್ನೂ ಕೂಡಾ ಈ ಹಕ್ಕಿನಿಂದ ವಂಚಿತರಾಗದಂತೆ ನೋಡುವುದು ನಮ್ಮೆಲ್ಲರ ಜವಬ್ದಾರಿ.

ನಮ್ಮ ಊರು ನಮ್ಮ ಮಕ್ಕಳು

ಇದು ಕರ್ನಾಟಕ ಸರ್ಕಾರ ಮತ್ತು ಯುನಿಸೆಫ್‌ನ ಸಂದೇಶ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ಜಿಲ್ಲಾಡಳಿತ (229011), ಜಿಲ್ಲಾ ಪಂಚಾಯತ್ (228448), ಪೊಲೀಸ್ ಇಲಾಖೆ (235100), ಕಾರ್ಮಿಕ ಇಲಾಖೆ (226368), ಸಾರ್ವಜನಿಕ ಶಿಕ್ಷಣ ಇಲಾಖೆ (226162), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (226292), ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಘ(227581), ರಾಯಚೂರು ಹಾಗೂ ಯುನಿಸೆಫ್ “ಮಕ್ಕಳ ಸಂರಕ್ಷಣಾ” ಯೋಜನೆ, ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು.(230610).

unicef
unite for children

# “ಜನನ ಪ್ರಮಾಣಪತ್ರದ ಪ್ರಾಮುಖ್ಯತೆಯನ್ನು ನಾವು ಅರಿತುಕೊಂಡಿದ್ದೇವೆ. ಮಗುವಿಗೆ ಹೆಸರಿಟ್ಟ ತಕ್ಷಣವೇ ಇದನ್ನು ಪಡೆದಿದ್ದೇವೆ. ನೀವು ಪಡೆದುಕೊಂಡಿದ್ದೀರಾ.”

*– ತಂದೆ ತಾಯಂದಿರು*



- ಜನನ ಪ್ರಮಾಣಪತ್ರ ಪ್ರತಿಯೊಂದು ಮಗುವಿನ ಹಕ್ಕು. ಇದು ಅವರಿಗೆ ಕಾನೂನುಬದ್ಧ ಸಿಂಧುತ್ವವನ್ನು ನೀಡುತ್ತದೆ.
- ಶಾಲಾ ದಾಖಲಾತಿ, ಬ್ಯಾಂಕಿನಲ್ಲಿ ಖಾತೆ ತೆರೆಯುವುದು, ಪಾಸ್‌ಪೋರ್ಟ್, ಮತ್ತು ಬಾಲ್ಯ ವಿವಾಹ ಹಾಗೂ ಬಾಲ ಕಾರ್ಮಿಕ ಪದ್ಧತಿ ತಡೆಯಲು ಇದೊಂದು ಅವಶ್ಯಕ ದಾಖಲೆ.
- ಮಗುವಿನ ಜನನ ಯಾವುದೇ ಆಸ್ಪತ್ರೆ ಅಥವಾ ನರ್ಸಿಂಗ್ ಹೋಮ್‌ನಲ್ಲಿ ಉಂಟಾದಲ್ಲಿ ಮಗುವಿನ ಹೆಸರು, ಜನಿಸಿದ ದಿನಾಂಕ ಮತ್ತು ಸಮಯ ಮುಂತಾದ ಎಲ್ಲಾ ಅಧಿಕೃತ ಪುರಾವೆಯನ್ನು ಪಡೆದುಕೊಳ್ಳಿ. ಒಂದು ವೇಳೆ ಮಗುವು ಮನೆಯಲ್ಲೇ ಜನಿಸಿದಲ್ಲಿ, ಆಶಾ, ಎಎನ್‌ಎಮ್ ಅಥವಾ ಅಂಗನವಾಡಿ ಕಾರ್ಯಕರ್ತೆಯರ ನೆರವಿನಿಂದ ಮಗುವಿನ ಜನನವನ್ನು ತಕ್ಷಣವೇ ನೊಂದಣಿ ಮಾಡಿಸಿ.
- ಈ ಪ್ರಾಥಮಿಕ ಕಾಗದ ಪತ್ರದ ಆಧಾರದ ಮೇರೆಗೆ ಜನನ ಪ್ರಮಾಣಪತ್ರಕ್ಕಾಗಿ ಕೋರಿಕೆ ಸಲ್ಲಿಸಿ, ತಕ್ಷಣ ಅದನ್ನು ಪಡೆದುಕೊಳ್ಳಿ.

ನಮ್ಮ ಊರು ನಮ್ಮ ಮಕ್ಕಳು

ಇದು ಕರ್ನಾಟಕ ಸರ್ಕಾರ ಮತ್ತು ಯುನಿಸೆಫ್‌ನ ಸಂದೇಶ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ಜಿಲ್ಲಾಡಳಿತ (229011), ಜಿಲ್ಲಾ ಪಂಚಾಯತ್ (228448), ಪೊಲೀಸ್ ಇಲಾಖೆ (235100), ಕಾರ್ಮಿಕ ಇಲಾಖೆ (226368), ಸಾರ್ವಜನಿಕ ಶಿಕ್ಷಣ ಇಲಾಖೆ (226162), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (226292), ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಘ(227581), ರಾಯಚೂರು ಹಾಗೂ ಯುನಿಸೆಫ್ “ಮಕ್ಕಳ ಸಂರಕ್ಷಣಾ” ಯೋಜನೆ, ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು.(230610).

unicef
unite for children

# “ನಮ್ಮ ಮಗಳು ನಮಗಾಗಿ ದುಡಿಯುವುದಿಲ್ಲ. ನಾವು ಅವಳಿಗಾಗಿ ದುಡಿಯುತ್ತೇವೆ.”

*– ಧನರಾಜು ಮತ್ತು ಕೌಶಲ್ಯ,*
*9 ವರ್ಷ ಪ್ರಾಯದ ಬಾಲಕಿಯ ತಂದೆ–ತಾಯಿ*



- ಮಕ್ಕಳನ್ನು ದುಡಿಮೆಗೆ ತಳ್ಳಬೇಡಿ. 14 ವರ್ಷದೊಳಗಿನ ಮಕ್ಕಳನ್ನು ಯಾವುದೇ ಕೆಲಸದಲ್ಲಿ ದುಡಿಸುವುದು ಶಿಕ್ಷಾರ್ಹ ಅಪರಾಧ.
- ಮಕ್ಕಳು ನಿರಂತರವಾಗಿ ಶಾಲೆಗೆ ಹೋಗುತ್ತಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ. ಶಿಕ್ಷಣದಿಂದ ಮಕ್ಕಳಿಗೆ ಉಜ್ವಲ ಭವಿಷ್ಯ ಸಿಗುತ್ತದೆ.
- ಕನಿಷ್ಠ 10ನೇ ತರಗತಿವರೆಗೆ ಪ್ರತಿಯೊಂದು ಮಗುವಿಗೂ ಶಿಕ್ಷಣ ದೊರಕುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ.
- ಕಾನೂನಿನ ಪ್ರಕಾರ 14 ವರ್ಷದೊಳಗಿನ ಮಕ್ಕಳನ್ನು ದುಡಿಸಿದಲ್ಲಿ ರೂ. 20,000 ದಂಡ ಮತ್ತು 1 ವರ್ಷ ಜೈಲು.

ನಮ್ಮ ಊರು ನಮ್ಮ ಮಕ್ಕಳು

ಇದು ಕರ್ನಾಟಕ ಸರ್ಕಾರ ಮತ್ತು ಯುನಿಸೆಫ್‌ನ ಸಂದೇಶ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ಜಿಲ್ಲಾಡಳಿತ (229011), ಜಿಲ್ಲಾ ಪಂಚಾಯತ್ (228448), ಪೊಲೀಸ್ ಇಲಾಖೆ (235100), ಕಾರ್ಮಿಕ ಇಲಾಖೆ (226368), ಸಾರ್ವಜನಿಕ ಶಿಕ್ಷಣ ಇಲಾಖೆ (226162), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (226292), ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಘ(227581), ರಾಯಚೂರು ಹಾಗೂ ಯುನಿಸೆಫ್ “ಮಕ್ಕಳ ಸಂರಕ್ಷಣಾ” ಯೋಜನೆ, ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು.(230610).

unicef
unite for children

# “ನಮ್ಮ ಹಳ್ಳಿಯಲ್ಲಿ ಪ್ರತಿಯೊಂದು ಜನನ ಪ್ರಕರಣವನ್ನೂ ನೊಂದಣಿ ಮಾಡಲಾಗುತ್ತದೆ ಮಾತ್ರವಲ್ಲದೆ ಪ್ರತಿಯೊಂದು ಮಗುವು ಜನನ ಪ್ರಮಾಣಪತ್ರವನ್ನು ಪಡೆದಿದೆ. ನಿಮ್ಮ ಹಳ್ಳಿಯ ಸ್ಥಿತಿ ಹೇಗಿದೆ?”

*– ಅಂಗನವಾಡಿ ಕಾರ್ಯಕರ್ತೆ*




- ಜನನ ಪ್ರಮಾಣಪತ್ರ ಪ್ರತಿಯೊಂದು ಮಗುವಿನ ಹಕ್ಕು. ಇದು ಅವರಿಗೆ ಕಾನೂನುಬದ್ಧ ಸಿಂಧುತ್ವವನ್ನು ನೀಡುತ್ತದೆ.
- ಶಾಲಾ ದಾಖಲಾತಿ, ಬ್ಯಾಂಕಿನಲ್ಲಿ ಖಾತೆ, ಪಾಸ್‌ಪೋರ್ಟ್, ಮತದಾರರ ಪ್ರಮಾಣಪತ್ರ, ಮತ್ತು ಬಾಲ್ಯ ವಿವಾಹ ಹಾಗೂ ಬಾಲ ಕಾರ್ಮಿಕ ಪದ್ಧತಿ ತಡೆಯಲು ಇದೊಂದು ಅವಶ್ಯಕ ದಾಖಲೆ.
- ಜನನ ಪ್ರಮಾಣಪತ್ರವನ್ನು ಪಡೆಯುವುದು ತುಂಬಾ ಸುಲಭ. ಜನಿಸಿದ ಸ್ಥಳದಲ್ಲಿರುವ ಪುರಸಭೆ/ನಗರ ಸಭೆ/ತಾಲೂಕು ಕಛೇರಿ/ಗ್ರಾಮ ಪಂಚಾಯಿತಿ/ಗ್ರಾಮ ಲೆಕ್ಕಿಗರಲ್ಲಿ ಜನಿಸಿದ ಬಳಿಕ ಹೆಸರನ್ನು ನೊಂದಣಿಮಾಡಿಕೊಳ್ಳಬೇಕು ಅಷ್ಟೇ. ಈ ನೊಂದಣಿ ಆಧಾರದ ಮೇರೆಗೆ ಪ್ರಮಾಣಪತ್ರವನ್ನು ತಕ್ಷಣ ನೀವು ಪಡೆಯಬಹುದು/ ಪಡೆದುಕೊಳ್ಳಿ.

ನಮ್ಮ ಊರು ನಮ್ಮ ಮಕ್ಕಳು

ಇದು ಕರ್ನಾಟಕ ಸರ್ಕಾರ ಮತ್ತು ಯುನಿಸೆಫ್‌ನ ಸಂದೇಶ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ಜಿಲ್ಲಾಡಳಿತ (229011), ಜಿಲ್ಲಾ ಪಂಚಾಯತ್ (228448), ಪೊಲೀಸ್ ಇಲಾಖೆ (235100), ಕಾರ್ಮಿಕ ಇಲಾಖೆ (226368), ಸಾರ್ವಜನಿಕ ಶಿಕ್ಷಣ ಇಲಾಖೆ (226162), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (226292), ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಘ(227581), ರಾಯಚೂರು ಹಾಗೂ ಯುನಿಸೆಫ್ “ಮಕ್ಕಳ ಸಂರಕ್ಷಣಾ” ಯೋಜನೆ, ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು.(230610).

unicef
unite for children

# “ಹತ್ತಿಬೀಜ ಕ್ರಾಸಿಂಗ್ ಮತ್ತು ಕೃಷಿ ಕೇತ್ರಕ್ಕೆ ದುಡಿಯಲು ಮಕ್ಕಳು ಮಾತ್ರವೇ ಸೂಕ್ತವಾಗಿರುತ್ತಾರೆ ಎಂದು ಯಾರು ಹೇಳಿದ್ದು? ನನ್ನ ಹೊಲದಲ್ಲಿ ಮಕ್ಕಳಲ್ಲ, ಕೇವಲ ವಯಸ್ಕರು ಮಾತ್ರವೇ ದುಡಿಯುತ್ತಾರೆ. ಅವರು ದಕ್ಷತೆಯಿಂದ ದುಡಿಯುವುದನ್ನು ನಾನು ಕಂಡಿದ್ದೇನೆ.”

– *ಹತ್ತಿಬೀಜ ಬೆಳೆಗಾರರು*



- 14 ವರ್ಷದೊಳಗಿನ ಮಕ್ಕಳನ್ನು ಯಾವುದೇ ರೀತಿಯ ದುಡಿಮೆಗೆ ಇಟ್ಟುಕೊಳ್ಳುವುದು ಶಿಕ್ಷಾರ್ಹ ಅಪರಾಧ.
- ಮಕ್ಕಳನ್ನು ಕೆಲಸದಲ್ಲಿ ತೊಡಗಿಸಿಕೊಳ್ಳುವುದರಿಂದ ನೀವು ಅವರ ಶಿಕ್ಷಣ ಮತ್ತು ವೈಯಕ್ತಿಕ ವಿಕಸನವನ್ನು ಕಸಿದುಕೊಂಡಂತೆ ಹಾಗೂ ಅನಾರೋಗ್ಯಕ್ಕೆ ಗುರಿಮಾಡಿದಂತೆ.
- ದಕ್ಷವಾಗಿ ಕೆಲಸ ಮಾಡಬಲ್ಲ ವಯಸ್ಕರನ್ನು ಮಾತ್ರವೇ ಕೆಲಸಕ್ಕೆ ತೆಗೆದುಕೊಳ್ಳಿ.
- ಮಕ್ಕಳನ್ನು ದುಡಿಸುವುದರಿಂದ ಯಾವುದೇ ಬಡಕುಟುಂಬ ಉದ್ಧಾರವಾಗಿಲ್ಲ ಹಾಗೂ ಅಭಿವೃದ್ಧಿಯಾಗಲ್ಲ.
- 14 ವರ್ಷದೊಳಗಿನ ಮಕ್ಕಳನ್ನು ದುಡಿಸಿದಲ್ಲಿ ನೀವು ಕಾನೂನಿನ ಬಲೆಗೆ ಬೀಳುತ್ತೀರಿ ಜೋಕೆ !

ನಮ್ಮ ಊರು
ನಮ್ಮ ಮಕ್ಕಳು

ಇದು ಕರ್ನಾಟಕ ಸರ್ಕಾರ ಮತ್ತು ಯುನಿಸೆಫ್‌ನ ಸಂದೇಶ

ಪ್ರಕಟಣೆ : ಜಿಲ್ಲಾಡಳಿತ (229011), ಜಿಲ್ಲಾ ಪಂಚಾಯತ್ (228448), ಪೊಲೀಸ್ ಇಲಾಖೆ (235100), ಕಾರ್ಮಿಕ ಇಲಾಖೆ (226368), ಸಾರ್ವಜನಿಕ ಶಿಕ್ಷಣ ಇಲಾಖೆ (226162), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (226292),